ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು-12

**E-mail:commissioner.pue@gmail.com. * Ph. No.23361857, 23361858* Fax-23361852**

ಸಂಖ್ಯೆ: ಪಪೂಶಿಇ/130/ಸಿ-02/ಧಾರವಾಡ/ಉಖಾಪೂಸೇ-3/2017-18 ದಿನಾಂಕ: 17 :10:2017

**ಜ್ಞಾಪನ**

ವಿಷಯ: 2013ನೇ ಸಾಲಿನಲ್ಲಿ ನೇಮಕಗೊಂಡ ಉಪನ್ಯಾಸಕರ ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವೆಂದು ಘೋಷಿಸುವ ಬಗ್ಗೆ

ಉಲ್ಲೇಖ: 1.ಪದವಿ ಪೂರ್ವ ಶಿಕ್ಷಣ ಇಲಾಖೆ, ವಿಶೇಷ ನೇಮಕಾತಿ ಅಧಿಸೂಚನೆ: ಪಪೂಶಿಇ/ಸಿಬ್ಬಂದಿ-1 ವಿಶೇಷ ನೇಮಕ 01/2011-12 ದಿನಾಂಕ 13-4-2012

2.ವಿಶೇಷಾಧಿಕಾರಿಗಳ ಕಛೇರಿ, ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ಇವರ ಪತ್ರ: ಸಿಎಸಿ 4/ಪಮೂಶಿ/ನೇ/01/2012-13 ದಿ: 13-02-2012

3.ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಪಮೂಶಿ ಸಿಬ್ಬಂದಿ-2 ವಿಶೇಷ ನೇಮಕ 01/2011-12(ಭಾಗ-2) ದಿನಾಂಕ: 27-06-2013

4. ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಧಾರವಾಡ ಜಿಲ್ಲೆ ಇವರ ಪ್ರಸ್ತಾವನೆ

****

**ಪ್ರಸ್ತಾವನೆ:**

2013ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳಿಗೆ ವಿಶೇಷಾಧಿಕಾರಿಗಳ ಕಛೇರಿ, ಕೇಂದ್ರೀಕೃತ ದಾಖಲಾತಿ ಘಟಕದಿಂದ ನೇಮಕಾತಿ ಹೊಂದಿ, ಉಲ್ಲೇಖ (3) ಆದೇಶದಂತೆ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಉಪನ್ಯಾಸಕರು, ನಾಲ್ಕು ವರ್ಷಗಳ ಖಾಯಂಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರುವರೆಂದು ಘೋಷಿಸುವ ಸಲುವಾಗಿ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರು ಶಿಫಾರಸ್ಸಿನೊಂದಿಗೆ ಸಲ್ಲಿಸಲಾದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಆದೇಶ:-**

ಈ ಕೆಳಕಂಡ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಹೆಸರಿನ ಮುಂದೆ ವಿವರಿಸಿದಂತೆ ನಾಲ್ಕು ವರ್ಷಗಳ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುವ ಪ್ರಯುಕ್ತ ಸದರಿಯವರ ಪರಿವೀಕ್ಷಣಾ ಅವಧಿಯನ್ನು ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರ ಶಿಫಾರಸ್ಸಿನ ಮೇರೆಗೆ ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಗಳು 1977ರ ನಿಯಮ 5(1) (ಎ) ಅನ್ವಯ ತೃಪ್ತಿಕರವಾಗಿ ಕಾರ್ಯ ನಿರ್ವಹಿಸಿದ್ದಾರೆಂದು ಘೋಷಿಸಲಾಗಿದೆ. ಈ ಮಾಹಿತಿಯನ್ನು ಸಂಬಂಧಪಟ್ಟ ಉಪನ್ಯಾಸಕರ ಸೇವಾ ಪುಸ್ತಕದಲ್ಲಿ ನಮೂದಿಸಿ ದೃಢೀಕರಿಸುವಂತೆ ಸಂಬಂಧಪಟ್ಟ ಕಾಲೇಜು ಪ್ರಾಂಶುಪಾಲರಿಗೆ ತಿಳಿಸಿದೆ.

| ಕ್ರ.ಸಂ. | ಹೆಸರು/ಪದನಾಮ/ವಿಳಾಸ ಶ್ರೀ/ಶ್ರೀಮತಿ | ಕರ್ತವ್ಯಕ್ಕೆ ಹಾಜರಾದ ದಿನಾಂಕ | ಖಾಯಂ ಪೂರ್ವ ಸೇವೆ ಪೂರೈಸಿದ ದಿನಾಂಕ | ಪರಿವೀಕ್ಷಣಾಅವಧಿ ತೃಪ್ತಿಕರವೆಂದು ಘೋಷಿಸಿದ ದಿನಾಂಕ |
|---|---|---|---|---|
| 1 | ಗಂಗಾಧರ ಡಿ, ಗಣಿತಶಾಸ್ತ್ರ ಉಪನ್ಯಾಸಕರು, ಸ ಪ ಪೂ ಕಾ. ಹೆಬ್ಬಾಳ, ನವಲಗುಂದ ತಾ, ಧಾರವಾಡ ಜಿಲ್ಲೆ | 5/7/2013 | 4/7/2017 | 05/07/2017 |

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1)ಮಹಾಲೇಖಪಾಲರು ( ಎ ಅಂಡ್ ಇ) – ಕರ್ನಾಟಕ, ಪಾರ್ಕ್ ಹೌಸ್ , ಬೆಂಗಳೂರು

2)ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಧಾರವಾಡ ಜಿಲ್ಲೆ,

3)ಸಹಾಯಕ ನಿರ್ದೇಶಕರು – ಇ–ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅಂತರ್ಜಾಲದಲ್ಲಿ ಅಳವಡಿಸಲು

4)ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರುಗಳಿಗೆ ಮೂಲ ಸೇವಾಪುಸ್ತಕಗಳೊಂದಿಗೆ ಮುಂದಿನ ಕ್ರಮಕ್ಕಾಗಿ

5)ಸಂಬಂಧಿಸಿದ ಉಪನ್ಯಾಸಕರುಗಳಿಗೆ – ಪ್ರಾಂಶುಪಾಲರ ಮೂಲಕ

6)ಕಛೇರಿ ಪ್ರತಿ